ಸುದ್ದಿ ಇಲ್ಲಿ ತನಕ ಬಂತ? ಓಣ್ಯಾಗ ಹುಡುಗ್ರು ಇದರ ಬಗ್ಗಿ ಕೇಳುವಂಗಾಯ್ತ?' ಎನ್ನುತ್ತಾ ಲೊಚಗುಟ್ಟಿದಳು ರೋಜಾನ ಅಜ್ಜಿ.

'ಅದೇನ ಸುದ್ದಿ? ನೀವ ಹೇಳಬಿಟ್ರೆಲಾ ಎಲ್ಲಾ ಮೋಕಳೀಕ ಆಗ್ತದ' ಮಲ್ಲವ್ವನ ಅವ್ವ ಒತ್ತಾಯ ಮಾಡಿದಳು.

'ಅದೇನ ಅಂಥಾ ದೊಡ್ಡ ಸುದ್ದಿ ಅಲ್ಲ ಬಿಡವಾ. ನಮ್ಮ ಹಿರ್ಯಾರ್ ತೀರಿಕೊಂಡ ಐದ ವರ್ಷ ಆತಲಾ?' ಅಲ್ಲಿ ಕಟ್ಟಿ ಮ್ಯಾಲ ಕುಳಿತವರ ಎಲ್ಲಾರ ಮುಖ ಗಂಭೀರವಾದವು.

'ಹೌದು, ಅದಕ್ಕ ಇದಕ್ಕ ಏನ ಸಂಬಂಧ ಐತಿ ಅಂತೀನಿ?' ಮಲ್ಲವ್ವನ ಅವ್ವ ಕೇಳೇ ಬಿಟ್ಟಳು.

'ಅದಕ್ಕ ಸಂಬಂಧ ಐತಿ ನಮ್ಮವ್ವ. ಮೊದಲ ಎರಡ ಮೂರ ವರ್ಷ ತಿಂಗಳಾ ನಮ್ಮವರದ ಪೆನ್ಷನ್ ಬರ್ತಿತ್ತು. ಅದ ಅತ್ಲಾಗ ಇತ್ಲಾಗ ಖರ್ಚ ಆಗತಿತ್ತ.'

'ಅಕ್ಕಾರ ನಿಮ್ಮದೇನ ಖರ್ಚ ಇರ್ತದ ಬಿಡ್ರಿ? ಮಗನ ಮನ್ಯಾಗ ಸಂಪಾಗಿ ಅದೀರಿ. ಬಾಳಂದ್ರ ಔಷದಕ್ಕ, ಒಂದಿಷ್ಟ ಅರಿವಿ ಅಂಚಡಿಗೆ ಖರ್ಚಾದೀತು, ಇಲ್ಲಂದ್ರ ಮೊಮ್ಮಕ್ಕಳಿಗೆ ಏನರ ನೀವ ಕೊಡಸೂದ ಇದ್ದಿರಬೇಕು?' ಮಲ್ಲವನ ಗಂಡ ನಡವ ಬಾಯಿ ಹಾಕಿದ.

'ಅಯ್ಯ ನಿಮಗ ಏನ್ ಹೇಳೂದದ? ಇರಿವಿ ಭಾರ ಇರವಿಗೆ ಆನಿ ಭಾರ ಆನಿಗೆ ಇದ್ದ ಇರ್ತದ. ಅವರವರ ವಜ್ಜಾ ಅವರ ಹೊರಬೇಕು. ಮೊಮ್ಮಕ್ಕಳಿಗೇನು? ಅವರ ಅಪ್ಪ ಅವ್ವ ಛಂದಂಗಿ ದುಡಿತಾರ, ಎನ್ ಬೇಕ ಎಲ್ಲಾ ಕೊಡುಸ್ತಾರ. ನಾನೂ, ಮನೀಗೆ ಖರ್ಚ ಮಾಡತಾನ ಇರ್ತೀನಿ. ಮನಿ ಅಂದ್ರ ನೂರಾ ಎಂಟ ಇದ್ದ ಇರ್ತಾವು. ಇರ್ಲಿ ತಗೀರಿ ಆ ಮಾತ.'

'ಮತ್ತ ನೀವ ಏನರೆ ಬ್ಯಾಟಾ ಮಾಡಿ ಮಾಸ್ತರರ ಪೆನ್ಷನ್ ದುಡ್ಡದಾಗ ಬಂಗಾರದ ಒಡವಿ ಪಾಟಲಿ, ಅವಲಕ್ಕಿ ಸರ ಇಲ್ಲಾ ಬೋರಮಾಳ ಏನರ ಮಾಡಿಸಿಕೊಂಡಿರೇನ್ ಮತ್ತ' ಮಲ್ಲವ್ವ ವಿಚಾರಿಸುತ್ತಾ ಅಜ್ಜಿಯ ಕೊರಳ ಕಡೆ ನೋಡಿದಳು.

'ಮಲ್ಲವ್ವ ನಿನ್ನ ಬಾಯಾಗ ಸಕ್ರಿ ಬೀಳ್ಳಿ. ನೀ ನನ್ನ ಮನಸಿಂದ ಮಾತ ಹೇಳತಿ ನೋಡ.' ರೋಜಾನ ಅಜ್ಜಿ ಮುಖದಾಗ, ಹೌದೋ ಅಲ್ಲೋ ನಗು ಮೂಡಿತ್ತು.

'ಅದ ಏನಾತಪಾ ಅಂದ್ರ, ಎರಡ ವರ್ಷದ ಹಿಂದ ಕೋವಿಡ್ ಬಂದಿತ್ತಲಾ, ಆವಾಗ ಬ್ಯಾಂಕಿಗೆ ಹೋಗಿ ನಾವ ಜೀವಂತ ಅದೀವಿ ಅಂತ ಕಾಗದಪತ್ರಾ ಮಾಡಸಬೇಕಲಾ? ಅದನ್ನ ಆ ವರ್ಷ ಮಾಡಸಲಿಲ್ಲ. ನನ್ನ ಮಗಾ ತನ್ನ ಕೆಲಸದಾಗ, ನನ್ನ ಬ್ಯಾಂಕಿಗೆ ಕರಕೊಂಡ ಹೋಗೂದನ್ನ ಮರತಿದ್ದ. ಹಾಂ ಹಾಂ ಅನ್ನೂದಕ್ಕ ದೀಡ ವರ್ಷ ಕಳದ ಹೋತು. ಕಡೀಕ ನಮ್ಮ ಸ್ವಾದರಳಿಯನ ಮಗ್ಗ ಇಲ್ಲಿನ ಪೆನ್ಷನ್ ಆಫೀಸಿಗೆ ವರ್ಗ ಆಯಿತು. ಆಗ ಅವಾಂ ನನ್ನ ಕಚೇರಿಗೆ ಕರಕೊಂಡ ಹ್ವಾದ. ಮೂರು ತಿಂಗಳ ಎಡತಾಕಿದ ಮ್ಯಾಲ. ಎಲ್ಲಾ ಕಾಗದ ಪತ್ರ ಸರಿಯಾದವು. ಎರಡ ತಿಂಗಳಿಂದ ಫ್ಯಾಮಿಲಿ ಪೆನ್ಷನ್ ಕೂತದ. ಹ್ವಾದ ತಿಂಗಳ ಎರಡೂವರಿ ವರ್ಷದ ಬಾಕೀನೂ ಬಂತೂ. ಬ್ಯಾಂಕಿನ್ಯಾಗ ದೊಡ್ಡ ಕರಮು ಬಂದ ಕುಂತು. ಸಣ್ಣ ಪಗಾರದಾಗ ನನ್ನ ಗಂಡಗ ಒಡವಿ ಗಿಡವಿ ಮಾಡಾಕ ಅನುಕೂಲ ಆಗಿರಲಿಲ್ಲ. ಈಗ ಸಣ್ಣಾಕಿಲಿಂದ ಇದ್ದ ಆಸೆ ತೀರಿಸಿಕೊಳ್ಳಬೇಕು ಅನ್ನಿಸ್ತು. ಸೊಸಿನ್ನ ಕರಕೊಂಡ ಸರಾಫ ಪ್ಯಾಟಿ ಪತ್ತಾರ ಮಾನಪ್ಪನ ಅಂಗಡಿಗೆ ಹೋಗಿದ್ವಿ. ಒಂದ ಅವಲಕ್ಕಿ ಸರಾ ನಮ್ಮ ಇಬ್ಬರಿಗೂ ಬಾಳ ಪಸಂದಾತು. ಅದನ್ನ ಕೊಂಡ ಕೊಂಡ್ವಿ, ಹೊರಗ ಬಂದ ರಿಕ್ಷಾದಾಗ ಕೂತ ಮನಿಗೆ ಬಂದ್ವಿ. ಉಸ್ಸಪಾ ಅನಕೋತ ಸರದ ಡಬ್ಬಿ ತಗದ ನೋಡತೀವಿ, ಅವಲಕ್ಕಿ ಸರದಾನ ಬಂಗಾರದ ಅವಲಕ್ಕಿಯೊಳಗ ಕಂಡ್ರೂ ಕಾಣದಂಗ ಲಕ್ಷ್ಮಿ ಬಂದ ಕುಂತಾಳ'.

ಪ್ರತಿಕ್ರಿಯಿಸಿ: feedback@sudha.co.in

ಮಂದಹಾಸ

# ಇದು ಕಿವಿಗಳ ವಿಷ್ಯ!

■ ವೇದಾವತಿ ಹೆಚ್.ಎಸ್.

**ರುಕ್ಕು** ಆಗಾಗ ಅವಳ ಸ್ನೇಹಿತೆ ಸುಕ್ಕುವಿನ ಮನೆಗೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸುತ್ತಿರುತ್ತಾಳೆ. ಅಕಸ್ಮಾತ್ ರುಕ್ಕುವಿಗೆ ಬಿಡುವಿಲ್ಲದೆ ಕೈ ತುಂಬಾ ಕೆಲಸವಿದ್ದೂ ಸುಕ್ಕುವಿನ ಮನೆಗೆ ಹೋಗಲು ಆಗದಿದ್ದರೆ ಸುಕ್ಕುನೇ ರುಕ್ಕುವಿನ ಮನೆಗೆ ಹೋಗಿ ಊರ್ನಾಡು ವಿಷಯಗಳ ಬಗ್ಗೆ ಮಾತನಾಡುತ್ತಾ ತಮ್ಮ ತಮ್ಮ ಸಂಸಾರದಲ್ಲಿ ನಡೆಯುತ್ತಿರುವ ಆಗುಹೋಗುಗಳ ಜೊತೆಗೆ ಕಷ್ಟಸುಖಗಳನ್ನು ಹಂಚಿಕೊಳ್ಳುತ್ತಿರುತ್ತಾರೆ. ಅವರಿಬ್ಬರು ಅವರವರ ಕುಟುಂಬದವರ ವಿಷಯಗಳನ್ನು ಮಾತನಾಡುವಾಗ ಅಕ್ಕಪಕ್ಕ ಕುಳಿತು ಕಿವಿ ಕಚ್ಚಿಕೊಂಡು ಮಾತನಾಡುವುದು ಸಾಮಾನ್ಯವೆನ್ನಬಹುದು. ಕಿವಿ ಕಚ್ಚಿಕೊಂಡು ಮಾತನಾಡುವುದು ಅಂದರೆ ಕಿವಿಯನ್ನು ಹಲ್ಲಿನಿಂದ ಕಚ್ಚುವುದೆಂದು ತಿಳಿಯಬೇಡಿ, ನಮ್ಮ ಭಾಷೆಯಲ್ಲಿ ಯಾರಿಗೂ ಕೇಳಿಸದಂತೆ ಪಿಸಿಪಿಸಿ ಅಂತ ಗುಟ್ಟಾಗಿ ಮಾತನಾಡುವುದು ಎಂದರ್ಥ.

ಅವರಿಬ್ಬರು ಪಿಸಿಪಿಸಿ ಎಂದು ಗುಟ್ಟಾಗಿ ಮಾತನಾಡುವುದು ಅವರ ಮನೆಯಲ್ಲಿರುವ ಗಂಡ, ಅತ್ತೆನಾದಿನಿಯರ ವಿಷಯಗಳೇ ಆಗಿರುತ್ತಿದ್ದವು. ಇದು ಬರೀ ರುಕ್ಕು ಮತ್ತು ಸುಕ್ಕುವಿನ ಕಥೆ ಮಾತ್ರವಲ್ಲ! ಬಹಳಷ್ಟು ಹೆಂಗಸರು ತಮ್ಮ ನೋವನ್ನು ಮತ್ತೊಬ್ಬರಲ್ಲಿ ಹೇಳಿಕೊಳ್ಳುವಾಗ ಕಿವಿಯ ಹತ್ತಿರಕ್ಕೆ ಹೋಗಿ ಪಿಸುಗುಟ್ಟುವುದು ವಾಡಿಕೆ. ಮತ್ತೊಬ್ಬರ ತಲೆಯೊಳಗೆ ತಮ್ಮ ಯೋಚನೆಗಳನ್ನು ತುಂಬುವುದಕ್ಕೆ ಕಿವಿ ಹಿಂಡುವುದು, ಕಿವಿ ಕಚ್ಚುವುದು ಎಂದು ಹೇಳುತ್ತಾರೆ. ಇವಳು, ಅವಳ ಕಿವಿ ಕಚ್ಚಿದಳು ಎಂದರೆ ಗುಟ್ಟಾಗಿ ಅವಳ ಬುರುಡೆಯೊಳಗೆ ಏನನ್ನೋ ತುಂಬಿದಳು ಎಂದರ್ಥ.



ಮನುಷ್ಯನ ಕಿವಿ ಎಂಬುದು ಎಲ್ಲಾ ಇಂದ್ರಿಯಗಳಂತೆ ಸಾಮಾನ್ಯ ಎಂದು ತಿಳಿಯುವುದು ತಪ್ಪು. ಕಿವಿಗೆ 'ಕರ್ಣ' ಎನ್ನುತ್ತಾರೆ. ಮಹಾಭಾರತದಲ್ಲಿ ಕರ್ಣಕುಂಡಲ ಧಾರನೆಂದು ಕುಂತಿ ಪುತ್ರ ಕರ್ಣನನ್ನು ಕರೆಯಲಾಗುತ್ತಿತ್ತು. ಕರ್ಣನಲ್ಲಿ ಕುಂಡಲ ಮತ್ತು ಕವಚ ಇರುವವರೆಗೂ ಯಾರಿಂದಲೂ ಆತನನ್ನು ಸೋಲಿಸಲು ಸಾಧ್ಯವಾಗಲಿಲ್ಲ. ಕರ್ಣ (ಕಿವಿ) ಎಂಬ ಹೆಸರನ್ನು ಧರಿಸಿ, ಅದನ್ನು ಆಚಂದ್ರಾರ್ಕ ಜನ ಕೊಂಡಾಡುವಂತೆ ಮಾಡಿದ.

ನಿಜಕ್ಕೂ ಕಿವಿಯ ಮಹಿಮೆ ದೊಡ್ಡದು. ಮಾನವ ಕಿವಿಗೂ ವಾನರ ಕಿವಿಗೂ ಹೋಲಿಕೆ ಇದ್ದರೂ ಅವುಗಳ ಗಾತ್ರ, ಆಕಾರ ದೃಷ್ಟಿಕೋನದಲ್ಲಿ ವ್ಯತ್ಯಾಸವಿದೆ. ಮಂಗನ ಕಿವಿಗಳು ತಲೆಯ ಮೇಲ್ಭಾಗದಲ್ಲಿ ಚೂಪಾಗಿ ಅಥವಾ ದುಂಡಗಿನ ಆಕಾರವನ್ನು ಹೊಂದಿರುವುದರಿಂದ ಹೆಚ್ಚಿನ ಶಬ್ದಗಳನ್ನು ಕೇಳುವ ಸಾಮರ್ಥ್ಯ ಹೊಂದಿದ್ದೂ, ಬಾಹ್ಯ ಪರಿಸರವನ್ನು ಗ್ರಹಿಸಲು ನೆರವಾಗುತ್ತದೆ. ಮಾನವರ ಕಿವಿಗಳು ತಲೆಯ ಪಕ್ಕದಲ್ಲಿ ಚಪ್ಪಟೆಯಾಗಿರುವುದರಿಂದ ಸಂವಹನ ಮತ್ತು ಧ್ವನಿಗಳನ್ನು ಗ್ರಹಿಸಲು ಅನುಕೂಲಕರ. ಹಲವು ಬಗೆಯ ರೋಚಕ ಸುದ್ದಿಗಳನ್ನು ಕೇಳುವಾಗವಂತೂ ಕೆಲವರಲ್ಲಿ ಕಿವಿ ಬಹುಬೇಗ ನೆಟ್ಟಗಾಗಿ ಬಿಡುತ್ತದೆ.

ನಮ್ಮ ಎರಡು ಕಿವಿಗಳಿಲ್ಲದಿದ್ದರೆ ಅಕ್ಕಸಾಲಿಗರಿಗೆ ಎಷ್ಟೊಂದು ನಷ್ಟವಾಗುತ್ತಿತ್ತು ಎಂಬುದು ಊಹೆಗೂ ನಿಲುಕದ್ದು. ಶೋಡಷ ಸಂಸ್ಕಾರದಲ್ಲಿ ಕಿವಿ ಚುಚ್ಚುವುದು ಒಂದು ಸಂಪ್ರದಾಯ. ಮಂಗಳಪ್ರದವಾದ ಚಿನ್ನ ಅಥವಾ ರತ್ನದಿಂದ ಅಕ್ಕಸಾಲಿಯು ಶಾಸ್ತ್ರೋಕ್ತವಾಗಿ ಮಗುವಿನ ಕಿವಿಯ ಅಂಚಿಗೆ ತೂತನ್ನು ಕೊರೆದು ಅದಕ್ಕೊಂದು ಚಿಕ್ಕ ಓಲೆಯನ್ನು ಹಾಕುತ್ತಾನೆ. ಬಳಿಕ ಮಗು ಬೆಳೆದು ದೊಡ್ಡವರಾದ ಮೇಲೆ ಓಲೆ, ಬೆಂಡೋಲೆ, ವಜ್ರದ ಬೆಂಡೋಲೆ ಅಷ್ಟೇ ಅಲ್ಲದೆ ಕಿವಿಯ ತೂತನ್ನು ಅಗಲಿಸಿ ಓಲೆಗೆ ಬದಲು ಭಾರೀ ಬಳೆಗಳನ್ನೇ ಅಡ್ಡವಾಗಿ ಒಳಗೆ ತುರುಕಿ ಹಾಕಿಕೊಳ್ಳುವವರೂ ಇದ್ದಾರೆ.

ಕಿವಿಯ ಉಪಯೋಗ ಒಂದೇ ಎರಡೇ? ಕಣ್ಣಿಗೆ ಕನ್ನಡಕ ಬಂದಾಗ ಅದನ್ನು ಧರಿಸುವುದಕ್ಕೆ ಕಿವಿಗಳು ಅತ್ಯವಶ್ಯಕ. ಎರಡೂ ಕಿವಿಗಳು ಕನ್ನಡಕವನ್ನು ಸಮತೋಲನದಲ್ಲಿರುವಂತೆ ನೋಡಿಕೊಳ್ಳುತ್ತವೆ. ಹಾಗೆಯೇ, ನಮ್ಮ ಕಾಲದಲ್ಲಿ ಕಿವಿಗಳಿಲ್ಲದಿದ್ದರೆ ಶಿಕ್ಷಣವೇ ಅಸಾಧ್ಯವೆನ್ನಬಹುದು. ಶಿಕ್ಷಕರು ಮಕ್ಕಳನ್ನು ಕೂಗಿ ಕರೆಯುವುದು, ಮಕ್ಕಳು ತಮಗೆ ಅನ್ನಿಸಿದ್ದನ್ನು ಶಿಕ್ಷಕರಲ್ಲಿ ಹೇಳುವುದು ಮತ್ತು ಕೇಳುವುದು, ಕೇವಲ ಶ್ರವಣ ಮನನ ಇತ್ಯಾದಿಗೆ ಮಾತ್ರ ಕಿವಿ ಪ್ರಾಧಾನ್ಯ ಪಡೆದಿರಲಿಲ್ಲ. ಆನೆಯನ್ನು ಎಲ್ಲರೂ ನೋಡಿರುತ್ತೀರಿ ತಾನೇ? ಆನೆ ನಿಂತಲ್ಲೇ ನಿದ್ದೆ ಮಾಡುತ್ತಾ ಕಿವಿಯಿಂದ ಗಾಳಿ ಬೀಸಿಕೊಳ್ಳುವುದನ್ನು ನೋಡುವಾಗ ಮನುಷ್ಯರಾದ ನಮಗೆ ಆ ಭಾಗ್ಯ ಇಲ್ಲವಲ್ಲ ಅನ್ನಿಸುವುದುಂಟು. ■